**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು.</u>**

**<u>ದಿನಾಂಕಃ</u> 25.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>** ಪ್ರತಿವಾದಿ ಪರ ವಕೀಲರು **ಶ್ರೀ. ಜಿ ಜಿ ಆರ್** ರವರಿಂದ.

ನನಗೆ 37 ವರ್ಷ. ನಾನು ಪೆಮ್ಮನಹಳ್ಳಿಗೆ ಹೋಗಿ 30 ವರ್ಷ ಆಗಿರುತ್ತದೆ. ನನ್ನ ತಂದೆಯ ಸ್ವಂತ ಊರು ಗರಿಘಟ್ಟ. ಗರಿಘಟ್ಟದಲ್ಲಿ ನನ್ನ ತಂದೆ ಸುಮಾರು 40 ವರ್ಷಗಳಿಂದ ವಾಸವಾಗಿದ್ದರು. ನನ್ನ ತಂದೆಗೆ 03 ಜನ ಮಕ್ಕಳು ಅವರ ಹೆಸರು ಮಂಜುಳ , ಮಣಿ ಮತ್ತು ನಾನು ಜಗದೀಶ. ಈ ದಾವೆಯನ್ನು ನನ್ನ ತಾಯಿ ಹಾಕಿದ್ದು , ನನ್ನನ್ನು ಮತ್ತು ನನ್ನ ಸಹೋದರಿಯರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ತಂದೆ ಹೆಸರು ರಂಗೇಗೌಡ. ರಂಗೇಗೌಡರ ಹಿರಿಯ ಪತ್ನಿಗೆ ಇಬ್ಬರು ಮಕ್ಕಳು , ಕಿರಿಯ ಪತ್ನಿಗೆ 04 ಜನ ಮಕ್ಕಳು ರಂಗೇಗೌಡರ ಹಿರಿಯ ಪತ್ನಿಯ ಮಕ್ಕಳ ಹೆಸರು ಪುಟ್ಟಸ್ವಾಮಿಗೌಡ , ಕರೀಗೌಡ . ರಂಗೇಗೌಡರ ಕಿರಿಯ ಪತ್ನಿಯ ಮಕ್ಕಳ ಹೆಸರು ಪುಟ್ಟೇಗೌಡ , ಕೆಂಪೇಗೌಡ , ರಾಜೇಗೌಡ ಮತ್ತು ಗಿಡ್ಡಮ್ಮ. ಇವರ ಪೈಕಿ ಪುಟ್ಟಸ್ವಾಮಿಗೌಡ ಹೊರತುಪಡಿಸಿ ಅವರ ಎಲ್ಲಾ ಮಕ್ಕಳು ಜೀವಂತವಾಗಿರುತ್ತಾರೆ.

ನನ್ನ ತಂದೆ 2009 ರಲ್ಲಿ ಮೃತಪಟ್ಟಿರುತ್ತಾರೆ. ನಿಮ್ಮ ದೊಡ್ಡಪ್ಪನ ವುನೆಗೆ ನೀವು ಹೋಗಿ ಬಂದು ಮಾಡುವುದಿಲ್ಲ ಎಂದರೆ ಸಾಕ್ಷಿಯು ನಾನು ಹೋಗಿ ಬಂದು ಮಾಡುತ್ತಿದ್ದೆ ಆದರೆ ಈ ದಾವಾ ಹಾಕಿದ ನಂತರ ಹೋಗುತ್ತಿಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯು ಯಾವ ಬೆಳೆ ಬೆಳೆದಿರುತ್ತಾರೆಂದು ನನಗೆ ತಿಳಿದಿರುತ್ತದೆ ಮತ್ತು ನಾನು ಹೋಗಿ ನೋಡಿರುತ್ತೇನೆ. ದಾವಾ ಸ್ವತ್ತಿನ ಪಹಣಿಯು ಈಗಲೂ ಸಹಾ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. ಗರಿಘಟ್ಟ ಗ್ರಾಮದ ಸರ್ವೆ ನಂ. 22/1 ರ 0.06 ಗುಂಟೆ ತೋಟವು ಸಹಾ ಪ್ರತಿವಾದಿಯ ಹೆಸರಿನಲ್ಲಿ ಪಹಣಿಯು ಬರುತ್ತಿದೆ ಎಂದರೆ ಸರಿ. ಈಗ ಸಾಕ್ಷಿಗೆ ಗರಿಘಟ್ಟ ಗ್ರಾಮದ ಸರ್ವೆ ನಂ. 22/1 ಪಹಣಿ ತೋರಿಸಿದ್ದು ನೋಡಿ ಒಪ್ಪಿರುತ್ತಾರೆ. ಸದರಿ ಪಹಣಿಯನ್ನು ನಿಡಿ 1 ಎಂದು ಗುರುತಿಸಲಾಯಿತು. ದಾವಾ ಸ್ವತ್ತು ಸರ್ವೆ ನಂ. 30/7 ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯ ಮಗನಾದ ಮೃತ ಕುಮಾರನ ಅಂತ್ಯಕ್ರಿಯೆ ಮಾಡಲಾಗಿದೆ ಎಂದರೆ ಸರಿ. ಮತ್ತು ಪ್ರತಿವಾದಿಯ ತಂದೆ ತಾಯಿ ಯನ್ನು ಸಹಾ ದಾವಾ ಸ್ವತ್ತಿನಲ್ಲಿ ಅಂತ್ಯಕ್ರಿಯೆ ಮಾಡಲಾಗಿದೆ ಎಂದರೆ

ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯು ಅಡಿಕೆ ಫಸಲು ಬೆಳೆದಿರುತ್ತಾರೆ ಎಂದರೆ ಸಾಕ್ಷಿಯು ಬೆಳೆದಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಅರಕಲಗೂಡು ತಾಲ್ಲೂಕು , ಗರಿಘಟ್ಟ ಗ್ರಾಮದ ರಂಗೇಗೌಡರ ಮಗ ಪುಟ್ಟಸ್ವಾಮಿಗೌಡ ಎಂದರೆ ಪ್ರತಿವಾದಿಯ ತಂದೆ ಮತ್ತು ನನ್ನ ದೊಡ್ಡಪ್ಪ ಎಂದರೆ ಸರಿ ಮತ್ತು ಕರೀಗೌಡ ನನ್ನ ತಂದೆ ಎಂದರೆ ಸರಿ. ನನ್ನ ತಂದೆ ಕರೀಗೌಡ ಪುಟ್ಟಸ್ವಾಮಿಗೌಡ ಪ್ರತಿವಾದಿಯ ತಂದೆಗೆ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿಯಾಗಿದ್ದು ನನ್ನ ತಂದೆಗೆ ಬರಬೇಕೆಂದು ಈ ದಾವೆ ಹಾಕಿರುತ್ತೇನೆ. ನನ್ನ ತಂದೆಗೆ ಬಂದಿದ್ದು ಅವರೇ ಸ್ವಾದೀನದಲ್ಲಿದ್ದರು. ದಾವೆ ಹಾಕುವ ಪೂರ್ವದಲ್ಲಿ ನಮ್ಮ ವಕೀಲರಿಗೆ ಆಸ್ತಿ ನಮಗೆ ಬರಬೇಕೆಂಬ ವಿಚಾರವನ್ನು ತಿಳಿಸಿರುತ್ತೇನೆ. ಈ ದಾವಾ ಹಾಕುವ ಪೂರ್ವದಲ್ಲಿ ದಾವಾ ಸ್ವತ್ತನ್ನು ಬಿಟ್ಟು ಕೊಡುವಂತೆ ನಾನು ಪ್ರತಿವಾದಿಗೆ ಕೋರಿರುತ್ತೇನೆ ಮತ್ತು ಪಂಚಾಯ್ತಿ ಸಹಾ ಮಾಡಿ ಕೋರಿರುತ್ತೇನೆ. ಪಂಚಾಯ್ತಿ ಮಾಡಿದ ನಂತರವೂ ಇಲ್ಲಿಯವರೆಗೂ ಪ್ರತಿವಾದಿ ದಾವಾ ಸ್ವತ್ತನ್ನು ಬಿಟ್ಟು ಕೊಟ್ಟಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತು ನಮಗೆ ಬರಬೇಕು ಆದರೆ ಪ್ರತಿವಾದಿ ದಾವಾ ಸ್ವತ್ತನ್ನು ನಮಗೆ ಬಿಟ್ಟುಕೊಡುತ್ತಿಲ್ಲ ಎಂಬ ವಿಚಾರವನ್ನು ದಾವೆ ಹಾಕುವ ಸಮಯದಲ್ಲಿ ನಮ್ಮ ವಕೀಲರಿಗೆ ಹೇಳಿರುತ್ತೇನೆ. ದಾವಾ ಸ್ವತ್ತನ್ನು ನ್ಯಾಯಾಲಯದ ಮುಖಾಂತರವಾದರೂ ಬಿಡಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ದಾವೆ ಹಾಕಿರುತ್ತೇನೆ. ಸರ್ವೆ ನಂ. 30/7 ರಲ್ಲಿ ಒಂದು ಎಕರೆ ಹತ್ತು ಗುಂಟೆ ಜಾಗವು ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಈಗ ಸಾಕ್ಷಿಗೆ ಸರ್ವೆ ನಂ. 30/7 ರ ಆರ್ ಟಿ ಸಿ ತೋರಿಸಿದ್ದು ಅದರಲ್ಲಿ ಪ್ರತಿವಾದಿ ಹೆಸರಿನಲ್ಲಿ ಒಂದು ಎಕರೆ ಹತ್ತು ಗುಂಟೆ ಇದೆ ಎಂದರೆ ಸಾಕ್ಷಿ ಒಪ್ಪುತ್ತಾರೆ ಅದನ್ನು ನಿಡಿ 2 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ಜಮೀನಿನಲ್ಲಿ ನನಗೆ ಹಿಸ್ಸೆ ಬರಬೇಕೆಂದು ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ ಅಡಿಕೆ ತೋಟ ಇದ್ದು ಅದರ ಪಕ್ಕದಲ್ಲಿ ಪುಟ್ಟೇಗೌಡ ತೋಟ ಮಾಡಿಕೊಂಡಿರುತ್ತಾರೆ ಎಂದರೆ ಅಡಿಕೆ ತೋಟ ಮಾಡಿಕೊಂಡಿರುವ ಬಗ್ಗೆ ನಾನು ನೋಡಿಲ್ಲ ಆದರೆ ಅದರ ಪಕ್ಕದಲ್ಲಿ ಪುಟ್ಟೇಗೌಡ ರವರು ತೋಟ ಮಾಡಿಕೊಂಡಿರುವುದು ನನಗೆ ತಿಳಿದಿರುತ್ತದೆ. ದಾವಾ ಸ್ವತ್ತಿನಲ್ಲಿ ನಮಗೆ ಹಿಸ್ಸೆ ಬರಬೇಕೆಂಬ ವಿಚಾರವನ್ನು ನಮ್ಮ ವಕೀಲರಿಗೆ ಹೇಳಿರುತ್ತೇನೆ. ದಾವಾ ಸ್ವತ್ತು 1999-2000 ನೇ ಸಾಲಿನಲ್ಲಿ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಪ್ರತಿವಾದಿಯ ತಂದೆಯಾದ ಪುಟ್ಟಸ್ವಾಮಿಗೌಡರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ಪುಟ್ಟಸ್ವಾಮಿಗೌಡ ತೀರಿಕೊಂಡ ನಂತರ ಅವರ

ಮಗನಾದ ಪ್ರತಿವಾದಿ ಪೌತಿ ಖಾತೆ ಮುಖಾಂತರ ಹೆಸರಿಗೆ ವರ್ಗಾಯಿಸಿ ಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ಹೇಳದೆ ಪ್ರತಿವಾದಿಯ ಹೆಸರಿಗೆ ವರ್ಗಾಯಿಸಿ ಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಸರ್ವೆ ನಂ. 30/7 ರಲ್ಲಿ 4 ಎಕರೆ 1 ಗುಂಟೆ ಜಮೀನು ಇದೆ. ದಾವೆ ಹಾಕುವ ಪೂರ್ವದಲ್ಲಿ ದಾವಾ ಸ್ವತ್ತನ್ನು ನನ್ನ ತಂದೆ ಅಥವಾ ತಾಯಿ ಹೆಸರಿಗೆ ವರ್ಗಾಯಿಸಿ ಕೊಳ್ಳಲು ನಾನು ಪ್ರಯತ್ನ ಪಟ್ಟಿರುತ್ತೇನೆ. ಆದರೆ ಖಾತೆಯು ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ಹಾಗಾಗಿ ವರ್ಗಾಯಿಸಿರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂದಪಟ್ಟ ಪಹಣಿಯಲ್ಲಿ ಪ್ರತಿವಾದಿಯ ಹೆಸರು ಇರುವುದನ್ನು ನಾನು ಎ ಸಿ ಕೋರ್ಟ್ ನಲ್ಲಿ ತಾಕೀತು ಮಾಡಿರುತ್ತೇನೆ. ಎ ಸಿ ಕೋರ್ಟ್ ಗೆ ಸಂಬಂದಪಟ್ಟ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಮತ್ತು ಆ ಪ್ರಕರಣವು ಇನ್ನೂ ಚಾಲ್ತಿಯಲ್ಲಿರುತ್ತದೆ.

2023 ನೇ ಸಾಲಿನಲ್ಲಿ ಪ್ರತಿವಾದಿಯು ದಾವಾ ಸ್ವತ್ತಿನ ಕಂದಾಯ ಕಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ಹೆಸರಿಗೆ ವರ್ಗಾಯಿಸಿ ಕೊಂಡ ನಂತರ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ 02 ಕಂದಾಯ ರಶೀದಿಗಳನ್ನು ತೋರಿಸಿದ್ದು ಸದರಿ ರಶೀದಿಗಳು ಪ್ರತಿವಾದಿ ಕಟ್ಟಿರುವ ಕಂದಾಯ ರಶೀದಿ ಎಂದರೆ ಸಾಕ್ಷಿ ಒಪ್ಪಿರುವುದಿಲ್ಲ. ಪೆಮ್ಮನಹಳ್ಳಿ ಸರ್ವೆ ನಂ. 16 ರಲ್ಲಿ 0.38 ಗುಂಟೆ ನನ್ನ ತಂದೆ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಸದರಿ ಸರ್ವೆ ನಂಬರಿನ ಪಹಣಿಯನ್ನು ತೋರಿಸಿದ್ದು ಅದನ್ನು ಒಪ್ಪಿದ್ದು ಸದರಿ ಪಹಣಿಯನ್ನು ನಿಡಿ 3 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ಸ್ವತ್ತನ್ನು ನನ್ನ ತಂದೆ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ನನ್ನ ತಂದೆ ಗರಿಘಟ್ಟ ಗ್ರಾವು ಬಿಟ್ಟು ಪೆಮ್ಮನಹಳ್ಳಿ ಗ್ರಾಮಕ್ಕೆ ಹೋದ ನಂತರ ಖರೀದಿಸಿದ ಸ್ವತ್ತು ಎಂದರೆ ಸರಿ. ದಾವಾ ಸ್ವತ್ತನ್ನು ನನ್ನ ತಂದೆ ಪ್ರತಿವಾದಿಯ ತಂದೆಗೆ ಮಾರಿದ ನಂತರ ನನ್ನ ತಂದೆ ಸದರಿ ಸ್ವತ್ತನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ವಾದಿಗಾಗಲೀ ಅಥವಾ ಅವರ ಮಕ್ಕಗಳಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರ.ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**
**ಅರಕಲಗೂಡು.**